(ಇ) ಸಾತನೂರು ವ್ಯಾಪ್ತಿಯಲ್ಲಿ ಹೂಕುಂದ ಗ್ರಾಮದ ಪಂಚಾಯಿತಿ ಅಧ್ಯಕ್ಷರ ಸ್ಥಾನದ ಬಗ್ಗೆ :

ಶ್ರೀ ಡಿ.ಬಿ. ಶಿವಕುಮಾರ್ (ಸಾತನೂರು) : ಮಾನ್ಯ ಉಪಾಧ್ಯಕ್ಷರೇ, ನಾನು ಇದನ್ನು ನಿಯಮ 69 ಅಥವಾ 73ರಲ್ಲಿ ಪ್ರಸ್ತಾಪ ಮಾಡಬೇಕು ಎಂದು ಇದ್ದೆ. ನೋಡಿದರೆ ಇದಕ್ಕೆ ಹಾಕಿದ್ದೀರಿ. ನನಗೆ ಸಮಾಧಾನ ಆಗುವುದಿಲ್ಲ.

ಕನಕಪುರ ತಾಲ್ಲೂಕು ಸಾತನೂರು ಕ್ಷೇತ್ರದ ವ್ಯಾಪ್ತಿಯಲ್ಲಿ ಹೂಕುಂದ ಗ್ರಾಮ ಪಂಚಾಯಿತಿಗೆ ಎಸ್.ಟಿ. ಜನಾಂಗಕ್ಕೆ ಕಾಯಿರಿಸಿರುವುದು ಸರಿಯಷ್ಟೇ. ಶ್ರೀಮತಿ ನಾಗಮ್ಮ ಎಂಬುವರು ಒಂದೂವರೆ ವರ್ಷದ ಹಿಂದೆ ಹೂಕುಂದ ಪಂಚಾಯಿತಿಯ ಅಧ್ಯಕ್ಷರಾಗಿ ಆಯ್ಕೆಯಾಗಿ ಕಾರ್ಯನಿರ್ವಹಿಸುತ್ತಾ ಬಂದಿರುತ್ತಾರೆ. ಶ್ರೀಮತಿ ನಾಗಮ್ಮನವರು ಆ ಪಂಚಾಯಿತಿಯ ಏಕೈಕ ಪರಿಶಿಷ್ಟ ಜನಾಂಗದ ಸದಸ್ಯೆಯಾಗಿ ಚುನಾಯಿತರಾಗಿರುತ್ತಾರೆ. ಈ ಪಂಚಾಯಿತಿಯಲ್ಲಿ ಮೇಲು ವರ್ಗಕ್ಕೆ ಸೇರಿದ ಇತರೆ ಸದಸ್ಯರುಗಳು ಆ ಪಂಚಾಯಿತಿಯ ಹಣವನ್ನು ದುರುಪಯೋಗ ಮಾಡಿ, ಖಾಸಗಿಯಾಗಿ ಹಂಚಲು ಒತ್ತಾಯಿಸಿರುತ್ತಾರೆಂದು ಪಂಚಾಯಿತಿಯ ಅಧ್ಯಕ್ಷಿಣಿ ತಿಳಿಸಿರುತ್ತಾರೆ. ಶ್ರೀಮತಿ ನಾಗಮ್ಮನವರು ಹಣದ ದುರುಪಯೋಗಕ್ಕೆ ಒಪ್ಪದೇ ಇರುವ ಕಾರಣ ಅಕೆಯ ಮೇಲೆ ಅವಿಶ್ವಾಸ ನಿರ್ಣಯ ಮಂಡಿಸಿ ಮೇಲು ವರ್ಗಕ್ಕೆ ಸೇರಿದ ಇತರೆ ಸದಸ್ಯರುಗಳು ಅಧ್ಯಕ್ಷರ ಸ್ಥಾನದಿಂದ ಇಳಿಸಿರುತ್ತಾರೆ. ಮತ್ತೆ ನಾನು ಹತ್ತಾರು ಬಾರಿ ಒತ್ತಾಯ ಮಾಡಿದ ಮೇರೆಗೆ ಜಿಲ್ಲಾಧಿಕಾರಿಗಳ ಆದೇಶದಂತೆ ದಿನಾಂಕ 16-8-95ರಂದು ಚುನಾವಣೆ ನಡೆದು ಪಂಚಾಯಿತಿಯ ಶ್ರೀಮತಿ ನಾಗಮ್ಮ ಎಸ್.ಟಿ.ವರ್ಗಕ್ಕೆ ಸೇರಿದ ಏಕೈಕ ಸದಸ್ಯರಾಗಿದ್ದು, ಅಧ್ಯಕ್ಷರ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದರೂ ಸಹ ಇಲ್ಲಿಯವರೆಗೂ ಘೋಷಿಸಿರುವುದಿಲ್ಲ. ಇದರಿಂದ ಹರಿಜನ ಮಹಿಳೆಯರಿಗೆ ಮತ್ತು ವಿಶೇಷವಾಗಿ ಮಹಿಳಾ ವರ್ಗಕ್ಕೆ ಅನ್ಯಾಯವಾಗಿರುತ್ತದೆ. ಈ ಮೇಲ್ಕಂಡ ವಿಚಾರವನ್ನು ಪ್ರಸ್ತಾಪ ಮಾಡಲು ಅವಕಾಶ ಕೇಳಿದ್ದೆ. ಅದನ್ನು ಯಾವ ರೀತಿ ಉತ್ತರ ಕೊಡುತ್ತಾರೋ, ಕೊಡಲಿ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಈ ವಿಷಯಕ್ಕೆ ಸಂಬಂಧಿಸಿದಂತೆ ಹೇಳಿಕೆಯನ್ನು ಕೊಡಬಯಸುತ್ತೇನೆ.

ಕನಕಪುರ ತಾಲ್ಲೂಕು ಹೂಕುಂದ ಗ್ರಾಮ ಪಂಚಾಯಿತಿ ಅಧ್ಯಕ್ಷರ ಸ್ಥಾನವು ಅವಿಶ್ವಾಸ ನಿರ್ಣಯದ ಮೂಲಕ ತೆರವಾಗಿರುವುದರಿಂದ ಮರು ಚುನಾವಣೆಯನ್ನು ದಿನಾಂಕ : 16.8.1995 ರಂದು ನಡೆಸಲಾಗಿದೆ. ಈ ಗ್ರಾಮ ಪಂಚಾಯಿತಿ ಅಧ್ಯಕ್ಷರ ಸ್ಥಾನವು ಪರಿಶಿಷ್ಟ ಪಂಗಡದ ಮಹಿಳಾ ವರ್ಗಕ್ಕೆ ಮೀಸಲಾಗಿರುತ್ತದೆ.

ದಿನಾಂಕ : 16.8.95 ರಂದು ಕರೆಯಲಾದ ಗ್ರಾಮ ಪಂಚಾಯಿತಿಯ ಸಭೆಯಲ್ಲಿ ಒಟ್ಟು 13 ಜನ ಸದಸ್ಯರಲ್ಲಿ ಸಭೆಗೆ ಕೇವಲ 3 ಜನ ಸದಸ್ಯರು ಹಾಜರಿದ್ದು, ಪರಿಶಿಷ್ಟ ಪಂಗಡದ ಮಹಿಳಾ ವರ್ಗದಿಂದ ಒಂದೇ ಒಂದು ನಾಮಪತ್ರ ಸ್ವೀಕೃತವಾಗಿರುತ್ತದೆ. ಸಭೆಯಲ್ಲಿ ಕೋರಮ್ ಇಲ್ಲದೆ ಇರುವುದರಿಂದ ನಿಯೋಜಿತ ಅಧಿಕಾರಿಯವರು ಫಲಿತಾಂಶವನ್ನು ಪ್ರಕಟಣೆ ಮಾಡುವ ಬಗ್ಗೆ ಜಿಲ್ಲಾಧಿಕಾರಿಗಳಿಂದ ಸ್ಪಷ್ಟೀಕರಣವನ್ನು ಕೋರಿರುತ್ತಾರೆ.

ಸರ್ಕಾರಿ ಸುತ್ತೋಲೆ ಸಂಖ್ಯೆ: ಆರ್‌ಡಿಪಿ 1152 ಜೆಡ್‌ಪಿಎಸ್ 94, ದಿನಾಂಕ: 21.10.1994ರಲ್ಲಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 53(1)ರರಲ್ಲಿ ನಿರ್ದಿಷ್ಟಪಡಿಸಲಾದ ಕೋರಮ್‌ನ್ನು (ಒಟ್ಟು ಸದಸ್ಯರ $\frac{1}{3}$ ಭಾಗ) ಗ್ರಾಮ ಪಂಚಾಯಿತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಯ ಉದ್ದೇಶಕ್ಕಾಗಿ ಕರೆಯುವ

ಸಭೆಯಲ್ಲೂ ಕೂಡ ಅನುಸರಿಸಬೇಕಾಗುತ್ತದೆಂದು, ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸ್ಪಷ್ಟೀಕರಣ ನೀಡಲಾಗಿದೆ.

(ಈ) ದಕ್ಷಿಣ ಕನ್ನಡ ಜಿಲ್ಲಾ ಗ್ರಾಹಕರ ದೂರು ಪರಿಹಾರ ವೇದಿಕೆ

ಶ್ರೀ ಕೆ. ಜಯರಾಮಶೆಟ್ಟಿ (ಉಲ್ಲಾಳ) : ಸನ್ಮಾನ್ಯ ಉಪಾಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲಾ ಗ್ರಾಹಕರ ದೂರು ಪರಿಹಾರ ವೇದಿಕೆ, ಮಂಗಳೂರು, ಇದರ ಅಧ್ಯಕ್ಷ ನ್ಯಾಯಾಧೀಶರ ಹುದ್ದೆ ನಿವೃತ್ತಿಯಿಂದ ತೆರವಾಗಿ ಆರು ತಿಂಗಳುಗಳು ಕಳೆದರೂ ಇನ್ನೂ ಭರ್ತಿಯಾಗದೇ ಭಾರೀ ಸಂಖ್ಯೆಯ ಪ್ರಕರಣಗಳು ತನಿಖೆಗಾಗಿ ಕಾಯುತ್ತಿವೆ. ಇತರ 5 ಜಿಲ್ಲೆಗಳಲ್ಲಿ ಈ ವೇದಿಕೆಗಳು ನಿಷ್ಕ್ರಿಯವಾಗಿವೆ. ಎಲ್ಲಾ ಖಾಲಿ ಸ್ಥಾನಗಳನ್ನು ಭರ್ತಿ ಮಾಡಿ, ಗರಿಷ್ಟ ಆವು ತಿಂಗಳೊಳಗೆ ಗ್ರಾಹಕರಿಗೆ ನ್ಯಾಯ ನೀಡಬೇಕಾದ ಗ್ರಾಹಕರ ಶಿಕ್ಷಣ ಕಾಯ್ದೆ 1986ರ ಆಶಯವನ್ನು ಅನುಷ್ಠಾನಕ್ಕೆ ತರಬೇಕು ಸರ್ಕಾರವನ್ನು ಈ ಮೂಲಕ ಒತ್ತಾಯಿಸುತ್ತಿದ್ದೇನೆ.

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಆಹಾರ ಮತ್ತು ನಾಗರೀಕ ಪೂರೈಕೆ ಸಚಿವರ ಪರವಾಗಿ ಹೇಳಿಕೆಯನ್ನು ಕೊಡಬಯಸುತ್ತೇನೆ.

ದಕ್ಷಿಣ ಕನ್ನಡ ಜಿಲ್ಲಾ ವೇದಿಕೆ, ಮಂಗಳೂರು ಇವರ ಅಧ್ಯಕ್ಷರ ಸ್ಥಾನವನ್ನು ಭರ್ತಿ ಮಾಡಲಾಗಿದೆ. ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ಶ್ರೀ ಕೆ.ಆರ್. ಭಟ್‌ರವರನ್ನು ಈ ಸ್ಥಾನಕ್ಕೆ ನೇಮಿಸಲಾಗಿದೆ. ಶ್ರೀಯುತರು ದಿನಾಂಕ: 5-7-1995 ರಂದು ಅಧಿಕಾರ ವಹಿಸಿಕೊಂಡಿರುತ್ತಾರೆ. ಸದ್ಯದಲ್ಲಿ ಉನ್ನರ ಕನ್ನಡ ಜಿಲ್ಲಾ ವೇದಿಕೆಯ ಅಧ್ಯಕ್ಷರ ಸ್ಥಾನಕ್ಕೆ ಹಾಲಿ ನೇಮಕ ಮಾಡಲಾಗಿದ್ದ ಶ್ರೀ ನಾಗಯ್ಯಶೆಟ್ಟಿ ಅವರು ಅಧಿಕಾರ ವಹಿಸಿಕೊಳ್ಳಲು ಇಚ್ಚಿಸದೇ ಇರುವುದರಿಂದ ಖಾಲಿ ಉಳಿದಿದೆ. ಈ ಸ್ಥಾನವನ್ನು ಶೀಘ್ರದಲ್ಲಿಯೇ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು. ಉಳಿದ ಎಲ್ಲಾ ಜಿಲ್ಲಾ ವೇದಿಕೆಗಳ ಅಧ್ಯಕ್ಷ ಸ್ಥಾನಗಳನ್ನು ಭರ್ತಿ ಮಾಡಲಾಗಿದೆ.

(ಉ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನರಸಣ್ಣ ಜಾತಿಯವರಿಗೆ ಸೌಲಭ್ಯ

ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಉಪಾಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನರಸಣ್ಣ ಜಾತಿಯವರು ಸುಮಾರು 500 ಜನರಷ್ಟಿದ್ದಾರೆ. ಅವರು ಅತ್ಯಂತ ಹಿಂದುಳಿದಿದ್ದು, ಬಡವರಾಗಿದ್ದು ಸರ್ಕಾರದ ಎಲ್ಲಾ ಸವಲತ್ತುಗಳಿಂದ ವಂಚಿತರಾಗಿದ್ದಾರೆ. ಅವರಲ್ಲಿ ವಿದ್ಯಾವಂತರಂತೂ ಇಲ್ಲವೇ ಇಲ್ಲ. ಅವರು ನೂರಾರು ವರ್ಷಗಳ ಹಿಂದೆ ಉತ್ತರ ಕರ್ನಾಟಕದಿಂದ ಬಂದು ನೆಲೆಸಿದವರಾಗಿದ್ದಾರೆ ಮತ್ತು ಅವರ ಪೂರ್ವಜರು ಹಕ್ಕಿಪಿಕ್ಕಿ ಜನಾಂಗದವರು ಎಂದು ಅವರ ಹಿರಿಯರು ಹೇಳುತ್ತಿದ್ದಾರೆ. ಈಗ ಅವರನ್ನು ಯಾವುದೇ ಜಾತಿಯಾಗಿ ಗುರುತಿಸಿಲ್ಲ. ಇದು ಅತ್ಯಂತ ವಿಷಾದನೀಯ. ಅವರ ಜೀವನ ಕ್ರಮ ಅತ್ಯಂತ ನಿಕೃಷ್ಟ ಪರಿಸ್ಥಿತಿಯಲ್ಲಿದೆ. ಆದುದರಿಂದ ಅವರ ಅಭಿವೃದ್ಧಿಗಾಗಿ ಅವರನ್ನು ಹಕ್ಕಿಪಿಕ್ಕಿ ಜನಾಂಗದ ಉಪಜಾತಿಯಾಗಿ ಪರಿಗಣಿಸಿ, ನರಸಣ್ಣ ಜಾತಿಯನ್ನು ಪರಿಶಿಷ್ಟ ಪಂಗಡವೆಂದು ಘೋಷಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಹೇಳಿಕೆಯನ್ನು ಕೊಡಬಯಸುತ್ತೇನೆ.

ಯಾವುದೇ ಜಾತಿ ಅಥವಾ ಪಂಗಡವನ್ನು ಪರಿಶಿಷ್ಟ ಜಾತಿ ಅಥವಾ ಪಂಗಡಕ್ಕೆ ಸೇರಿಸುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಮಾತ್ರ ಇರುತ್ತದೆ. ರಾಜ್ಯ ಸರ್ಕಾರ ಕೇವಲ ಶಿಫಾರಸ್ಸನ್ನು ಮಾತ್ರ ಮಾಡಬಹುದಾಗಿದೆ. ಪರಿಶಿಷ್ಟ ಜಾತಿ : ಪಂಗಡಕ್ಕೆ ಸೇರಿಸುವಂತೆ ಕೋರಿ ಹಲವಾರು ಅರ್ಜಿಗಳು ಬಂದಿರುತ್ತವೆ. ಈ ಮನವಿಗಳನ್ನು